ವಿದ್ಯುತ್ ಕಳ್ಳತನ

58(214); ಡಾ॥ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್)

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಪ್ರತಿ ಜಿಲ್ಲೆಯಲ್ಲಿ ಪತ್ತೆಯಾಗಿರುವ ವಿದ್ಯುತ್ ಕಳ್ಳತನದ ಪ್ರಕರಣಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು);

ಆ) ಇದರಲ್ಲಿ ಭಾಗಿಯಾಗಿರುವ ವ್ಯಕ್ತಿಗಳು ಮತ್ತು ಸಂಸ್ಥೆಗಳ ಹೆಸರು ವಿವರಗಳೇನು; ಈ ಪ್ರತಿ ಪ್ರಕರಣದಲ್ಲಿ ಎಷ್ಟು ಪ್ರಮಾಣದ ವಿದ್ಯುತ್ ಕಳ್ಳತನವಾಗಿರುವುದನ್ನು ಪತ್ತೆ ಮಾಡಲಾಗಿದೆ; ಇದರಿಂದ ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಂಭವಿಸಿರುವ ನಷ್ಟವೆಷ್ಟು;

ಇ) ಎಷ್ಟು ಪ್ರಕರಣಗಳಲ್ಲಿ ಭಾಗಿಯಾಗಿರುವವರ ವಿರುದ್ಧ ಇಲ್ಲಿಯವರೆಗೆ ಕೈಗೊಂಡಿರುವ ಕ್ರಮಗಳೇನು ಮತ್ತು ಇವರುಗಳಿಂದ ಎಷ್ಟೆಷ್ಟು ಮೊತ್ತದ ದಂಡವನ್ನು ಕಟ್ಟಿಸಿಕೊಳ್ಳಲಾಗಿದೆ;

ಈ) ರಾಜ್ಯದಲ್ಲಿ ವಿದ್ಯುತ್ ಕಳ್ಳತನ ಮತ್ತು ವಿದ್ಯುತ್ ಸೋರಿಕೆಯನ್ನು ತಪ್ಪಿಸಲು ಸರ್ಕಾರದ ಮುಂದೆ ಇರುವ ಕ್ರಮಗಳೇನು?

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)

ಅ) **ಯಿಂದ** ಇ) **ವರೆಗೆ** ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಪ್ರತಿ ಜಿಲ್ಲೆಯಲ್ಲಿ ಪತ್ತೆಯಾಗಿರುವ ವಿದ್ಯುತ್ ಕಳ್ಳತನದ ಪ್ರಕರಣ ಮತ್ತು ವಿಧಿಸಿರುವ ದಂಡದ ಮೊತ್ತದ ವಿವರಗಳನ್ನು ಅನುಬಂಧ–1 ರಲ್ಲಿ ಒದಗಿಸಲಾಗಿದೆ.

ಈ) ರಾಜ್ಯದಲ್ಲಿ ವಿದ್ಯುತ್ ಕಳ್ಳತನ ಮತ್ತು ವಿದ್ಯುತ್ ಸೋರಿಕೆಯನ್ನು ತಪ್ಪಿಸಲು ಸರ್ಕಾರವು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ

1. ರಾಜ್ಯದಲ್ಲಿರುವ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ವಿದ್ಯುತ್ ಕಳವು ಮತ್ತು ಸೋರಿಕೆಯನ್ನು ತಡೆಗಟ್ಟಲು ವಿದ್ಯುತ್ ಕಳವಿಗೆ ಸಂಬಂಧಪಟ್ಟ ಎಲ್ಲಾ ಅಂಶಗಳ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನ ಹಾಗೂ ತಡೆಗಟ್ಟಲು ಪರಿಣಾಮಕಾರಿ ಯೋಜನೆಗಳನ್ನು ರೂಪಿಸಿಕೊಂಡು ಅವುಗಳನ್ನು ಕಾರ್ಯರೂಪಕ್ಕೆ ತರಲಾಗಿದೆ ಹಾಗೂ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಈ ನಿಟ್ಟಿನಲ್ಲಿ ತೀವ್ರತರ ಕಾರ್ಯಚರಣೆ ಕೈಗೊಳ್ಳಲಾಗಿದೆ.

2. ವಿದ್ಯುತ್ ಕಳವು/ಸೋರಿಕೆ ಪತ್ತೆ ಮಾಡಲು ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಜಾಗೃತದಳಗಳೊಂದಿಗೆ ವಿವಿಧ ಸ್ಥಾವರಗಳನ್ನು ಕ್ರಮ ಬದ್ಧವಾಗಿ ತಪಾಸಣೆ ಮಾಡಲು ರಾಜ್ಯದಲ್ಲಿ ಮೊದಲ ಬಾರಿಗೆ ವಿದ್ಯುತ್ ಕಂಪನಿಗಳಲ್ಲಿನ ಕಾರ್ಯ ಮತ್ತು ಪಾಲನಾ ವಿಭಾಗ ಹಾಗೂ ಮೀಟರ್ ಟೆಸ್ಟಿಂಗ್ ವಿಭಾಗದ ಅಧಿಕಾರಿಗಳನ್ನು ತೊಡಗಿಸಿಕೊಂಡು ವ್ಯವಸ್ಥಿತವಾದ ಹಾಗೂ ಪರಿಣಾಮಕಾರಿ ಕ್ರಮ ಕೈಗೊಳ್ಳಲಾಗಿದೆ.

3. ವಿದ್ಯುತ್ ವಿತರಣಾ ಲೈನುಗಳಲ್ಲಿ ನೇರವಾಗಿ ಹುಕ್ ಮಾಡುವುದನ್ನು ತಪ್ಪಿಸುವ ಸಲುವಾಗಿ ವಿದ್ಯುತ್ ಕಳ್ಳತನ ಜಾಸ್ತಿಯಿರುವ ಸ್ಥಳಗಳಲ್ಲಿ ಮೇಲ್ಮಾರ್ಗ ವಿದ್ಯುತ್ ವಾಹಕಗಳ ಬದಲಾಗಿ ಏರಿಯಲ್ ಬಂಚ್ ಕೇಬಲ್‌ಗಳನ್ನು ಬಳಸಲು ಕ್ರಮ ಕೈಗೊಳ್ಳುವುದು.

4. ವಿದ್ಯುತ್ ಸೋರಿಕೆ ಮತ್ತು ದುರುಪಯೋಗವನ್ನು ತಿಳಿಯುವ ಸಲುವಾಗಿ ವಿವಿಧ ಲೆವಲ್‌ಗಳಲ್ಲಿ ಎನರ್ಜಿ ಆಡಿಟ್ ಮಾಡಲು ಕ್ರಮ ಕೈಗೊಳ್ಳುವುದು.

ಪತ್ತೆ ಮಾಡಲಾದ ವಿದ್ಯುತ್ ಕಳವು ಪ್ರಕರಣಗಳಿಗೆ ಸಂಬಂಧಿಸಿದ ಕಾರ್ಯಾಚರಣೆಯ ಬಗ್ಗೆ ವಿವಿಧ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರ ಕೊಡುತ್ತಿದ್ದು ಸಾರ್ವಜನಿಕರಲ್ಲಿ ವಿದ್ಯುತ್ ಕಳವು ಮಾಡದಂತೆ ಮಾನಸಿಕ ಪ್ರಭಾವ ಬೀರಿ ಎಚ್ಚರಿಕೆಯ ವಾತಾವರಣ ಮೂಡಿಸಲಾಗುತ್ತಿದೆ.

ರೈತರ ಚೀನಾ ಪ್ರವಾಸ

61(217); ಡಾ॥ ಗುರುಪಾದಪ್ಪ ನಾಗಮಾರಪಳ್ಳಿ

ಅ) ಪ್ರಸಕ್ತ ಸಾಲಿನಲ್ಲಿ ರೈತರನ್ನು ಕೃಷಿ ವ್ಯವಸಾಯದ ಪದ್ಧತಿಯನ್ನು ಅಧ್ಯಯನ ಮಾಡುವ ಸಲುವಾಗಿ ಚೀನಾ ದೇಶ ಪ್ರವಾಸಕ್ಕೆ ಕಳುಹಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಇದುವರೆವಿಗೂ ಪ್ರತಿ ಜಿಲ್ಲೆಯಿಂದ ಎಷ್ಟೆಷ್ಟು ರೈತರನ್ನು ಪ್ರವಾಸಕ್ಕೆ ಕಳುಹಿಸಲು ಉದ್ದೇಶಿಸಲಾಗಿದೆ; ಇದಕ್ಕಾಗಿ ತಗಲುವ ವೆಚ್ಚವೆಷ್ಟು;

ಇ) ಒಂದು ವೇಳೆ ಪ್ರಸಕ್ತ ವರ್ಷದಿಂದ ರೈತರ ಈ ಅಧ್ಯಯನ ಪ್ರವಾಸವನ್ನು ರದ್ದು ಪಡಿಸುತ್ತಿದ್ದಲ್ಲಿ, ಇದಕ್ಕೆ ಕಾರಣಗಳೇನು?

ಶ್ರೀ ಕೃಷ್ಣ ಭೈರೇಗೌಡ (ಕೃಷಿ ರಾಜ್ಯ ಸಚಿವರು)

ಅ) ಪ್ರಸಕ್ತ ಸಾಲಿನಲ್ಲಿ ವಿದೇಶ ಪ್ರವಾಸಕ್ಕೆ ಕಳುಹಿಸುವ ಕಾರ್ಯಕ್ರಮವನ್ನು ತಡೆಹಿಡಿಯಲಾಗಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ದೇಶದೊಳಗಿನ ಅತ್ಯುತ್ತಮ ಬೇಸಾಯ ಕ್ರಮಗಳು, ಇತರೆ ರಾಜ್ಯಗಳಲ್ಲಿ ಅಳವಡಿಸಲಾಗುತ್ತಿರುವ ಆಧುನಿಕ ಕೃಷಿ ತಾಂತ್ರಿಕತೆಗಳು ಮತ್ತು ಸುಧಾರಿತ ಬೇಸಾಯ ಪದ್ಧತಿಗಳ ಬಗ್ಗೆ ಅರಿವು ಮೂಡಿಸಲು ರೈತರನ್ನು